ಜೆಲ್ಲನ್ನು ತೆಗೆದು ಟೇಬಲ್ಲಿನ ಮೇಲೆ ಸುರಿದುಬಿಟ್ಟಳು. ಫೆವಿಕಾಲ್ ಮತ್ತು ಶೇವಿಂಗ್ ಜೆಲ್ಲಿನ ಮಿಶ್ರಣ ತೊಪ್ಪೆಯಾಗಿ ಬಿದ್ದು ನಿಧಾನಕ್ಕೆ ಟೇಬಲ್ಲಿನ ಮೇಲೆ ಹರಡುತ್ತಿತ್ತು. ಅಷ್ಟರಲ್ಲಿ ಬ್ಯಾಗಿನಿಂದ ಮತ್ತೊಂದು ಚಿಕ್ಕ ಬಾಟಲಿಯಿಂದ ನೀಲಿ ಬಣ್ಣದ ನೀರಿನ ಎರಡು ತೊಟ್ಟನ್ನು ಮೆಲ್ಲಗೆ ಹರಡುತ್ತಿದ್ದ ಈ ತೊಪ್ಪೆಯ ಮೇಲೆ ಹನಿಸಿದಳು. ತೊಪ್ಪೆಯಲ್ಲಿ ನೀಲಿ ಎಳೆಗಳು ಹರಡುತ್ತಾ ಹಬ್ಬುತ್ತಾ ಬಿಳಿಯ ಮೂಲೆಮೂಲೆಗಳನ್ನು ಆಕ್ರಮಿಸುತ್ತಿದ್ದುದ್ದನ್ನು ಅಮಲ ಬಿಟ್ಟಕಣ್ಣಿನಿಂದ ನೋಡುತ್ತಿದ್ದಳು. ಕ್ಷಣಾರ್ಧದಲ್ಲಿ ಸಂಪೂರ್ಣವಾಗಿ ನೀಲಿಯಾಗಿ ಹೋದ ಮಿಶ್ರಣವನ್ನು ತನ್ನೆರಡೂ ಕೈಗಳಿಂದ ರೀಮಾ ಕಲೆಸಿದಳು. ಬೆರಳುಗಳಿಗೆ ನೀಲಿಯು ಧಾರಾಳವಾಗಿ ಹತ್ತಿತು. ತಂಗಿಯು ಕೈಹಾಕಲು ಬಂದಾಗ **"not now!"** ಎಂದು ಅವಳನ್ನು ತಡೆದಳು. ಟೇಬಲ್ಲಿನ ಅಂಚಿನವರೆಗೂ ಹರಿದು ಹೋಗುತ್ತಿದ್ದ ಅಂಟಿನ ನೀಲಿ ಮುದ್ದೆಯನ್ನು ರೀಮಾ ತನ್ನ ಕೈಗಳಲ್ಲಿ ಬಾಚಿ, ಮಗುಚಿ, ಪಳಗಿಸಿ ಮತ್ತೊಮ್ಮೆ ತೊಪ್ಪೆ ಮಾಡಿ ಮಧ್ಯದಲ್ಲಿರಿಸಿ ಹಳೆಯ ಬಟ್ಟೆಯಲ್ಲಿ ಕೈಯ್ಯೊರೆಸಿಕೊಂಡಾಗ ಇಷ್ಟೂ ಹೊತ್ತು ಉಸಿರು ಹಿಡಿದುಕೊಂಡಿದ್ದ ಅಮಲ ಸ್ವಲ್ಪ ಹಗೂರವಾದಳು. ಅಕ್ಕನ ಸಣ್ಣ ಸೂಚನೆ ಸಿಕ್ಕಿದ್ದೇ ಮತ್ತೆ ಓಡಿಹೋಗಿ ಅಗಲವಾದ ಸ್ಟೀಲ್ ಪಾತ್ರೆಯನ್ನು ಕಿಚನ್ನಿನಿಂದ ತಂದಳು. ರೀಮಾ ಪಾತ್ರೆಯಲ್ಲಿ ಅರ್ಧ ಬಾಟಲ್ ನೀರು ಹಾಕಿದಳು. ಬ್ಯಾಗಿನಿಂದ ಡಿಟರ್ಜೆಂಟ್ ಪೌಡರಿನ ಡಬ್ಬಿಯನ್ನು ತೆಗೆದು ನಾಲ್ಕು ಚಮಚ ಪೌಡರನ್ನು ನೀರಿನಲ್ಲಿ ಹಾಕಿ ಕದಡಿದಳು. ಡಿಟರ್ಜೆಂಟ್ ನೀರನ್ನು ಮೆಲ್ಲಗೆ ಅಂಟಿನ ಮುದ್ದೆಯ ಮೇಲೆ ಹಾಕಿದಾಗ ಪುಸ್**ssssss** ಎಂದು ಹೀರಿಕೊಂಡು ನೀಲಿ ಮುದ್ದೆಯು ಹಿಗ್ಗಿತು. ಹಿಗ್ಗುತ್ತಾ ಟೇಬಲ್ಲಿನ ಮೂಲೆಮೂಲೆಗೂ ಹರಡಿಕೊಂಡಿತು. ರೀಮಾ ಮತ್ತೆ ಆಸ್ಥೆಯಿಂದ ಅದನ್ನು ತೀಡಿ, ಕಲಸಿ ಸರಿಸುಮಾರು ಟೇಬಲ್ಲಿನಷ್ಟೇ ದೊಡ್ಡದಾದ ನೀಲಿ ಸ್ಪಂಜಿನ ಉಂಡೆಯನ್ನು ತಯಾರಿಸಿ **"now touch it!"** ಎಂದು ತಂಗಿಗೆ ಹೇಳಿದಳು. ಇದಕ್ಕೇ ಕಾಯುತ್ತಿದ್ದ ಅಮಲ ತಡೆಯಲಾರದ ಉನ್ಮಾದದಿಂದ ಸ್ಪಂಜಿನ ಉಂಡೆಯನ್ನು ಮುಟ್ಟಿ, ಹಿಡಿದು ಮನಸ್ಸಿಗೆ ಬಂದಂತೆ ಎಳೆದಾಡಿದಳು. ಅವಳಿಂದ ಕಸಿದುಕೊಂಡು ರೀಮಾ ಅದನ್ನು ಮೇಲಕ್ಕೆ ತೂರಿದಳು. ಈಗ ದೊಡ್ಡ ಬಲೂನಿನ ಗಾತ್ರವಿದ್ದ ನೀಲಿ ಸ್ಪಂಜು ವಿವಿಧ ಆಕಾರಗಳನ್ನು ಪಡೆಯುತ್ತಾ ಗಾಳಿಯಲ್ಲಿ ತೂರಾಡಿತು. ಅಮಲ ಕೇಕೆ ಹಾಕುತ್ತಾ ನನ್ನ ಬಳಿ ಬಂದು **"Uncle... we want the whole world to be a giant slime!"** ಎಂದು ಕೂಗಿದಳು.ರೀಮಾ ಸ್ಲೈಮನ್ನು ಮೆಲ್ಲಗೆ ನನ್ನ ಹತ್ತಿರ ಹಿಡಿದು **"touch it uncle!"** ಎಂದಳು. ಮುಟ್ಟಿದಾಗ ನನ್ನ ಬೆರಳಿಗೆ ನೀಲಿ ಮೆತ್ತಿಕೊಂಡಿದ್ದು ನೋಡಿ ಅಮಲ ಕೂಗಿ ಕುಪ್ಪಳಿಸಿದಳು. ಇದಾವುದನ್ನು ಲೆಕ್ಕಿಸದೇ ಟೀವಿ ನೋಡುತ್ತಿದ್ದ ಆಂಟಿ ಎದ್ದು ಮತ್ತೆ ಮಂಡಿನೋವಿನ ಗೋಳು ಹೇಳುತ್ತಾ ಬಂದಾಗ ನನ್ನ ಊಟ ಮುಗಿದು ಎಷ್ಟೋ ಹೊತ್ತಾದ್ದದ್ದು ಧುತ್ತೆಂದು ನೆನಪಾಯಿತು.

★★★

ಅಂದು ಈಸ್ಟರ್ ಭಾನುವಾರ. ಬೆಳಿಗ್ಗೆ ಏಳಕ್ಕೆಲ್ಲಾ ಸಂಜೀವ್ ಫೋನ್ ಮಾಡಿ ಡಾರ್ಲಿಂಗ್ ಹಾರ್ಬರ್‌ನಲ್ಲಿ ಆಯೋಜಿಸಲಾಗಿದ್ದ ಈಸ್ಟರ್ ಫೇರಿಗೆ ಹೋಗುತ್ತಿರುವ ವಿಷಯ ತಿಳಿಸಿ ಜೊತೆಗೆ ಬರಲು ಒತ್ತಾಯಿಸಿದ. ಸ್ನಾನ ಮುಗಿಸಿ ಒಗೆದ ಬಟ್ಟೆಗಾಗಿ ಹುಡುಕುತ್ತಿರುವಾಗಲೇ ತನ್ನ ಹೆಂಡತಿ ಅರುಂಧತಿ ಮತ್ತು 8 ವರ್ಷದ ಮಗ ವಿನ್ಯಾಸನ ಜೊತೆಗೆ ಸಂಜೀವ್ ಬಂದುಬಿಟ್ಟ.

**"I know you're a slow starter... here's your coffee.. hurry up!"** ಎನ್ನುತ್ತಾ ತಂದಿದ್ದ ಕಾಫಿಯ ಕಪ್ಪನ್ನು ಕೊಟ್ಟ. ಪುಟ್ಟ ವಿನ್ಯಾಸ್ **"Lets go... lets go"** ಎಂದು ಸಂಭ್ರಮದಿಂದ ಕೂಗುತ್ತಿದ್ದ. ಹಾರ್ಬರಿನಲ್ಲಿ ಕಿಕ್ಕಿರಿದ ಜನಸಂದಣಿ. ಏಪ್ರಿಲ್ ತಿಂಗಳ ಚುಮು ಚುಮು ಬಿಸಿಲು ಬಹಳ ಮೋಹಕವಾಗಿತ್ತು. ಜಯಂಟ್ ವೀಲ್ ನೋಡಿದ್ದೇ ವಿನ್ಯಾಸ ಅದರತ್ತ ಓಡಿದ.